ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕ.ಸಂ.ವಿ/ ಸಂ.ಕಾ/2014–15 ದಿನಾಂಕ: 9.06.2015

**ಅಧಿಸೂಚನೆ**

**ವಿಷಯ: 2015–16ನೇ ಸಾಲಿನ ಸಂಸ್ಕೃತ ಸಂಧ್ಯಾ ಮಹಾವಿದ್ಯಾಲಯದ ಪ್ರವೇಶಾತಿ ಅಧಿಸೂಚನೆ**

ಸಂಸ್ಕೃತ ಶಿಕ್ಷಣ ಮತ್ತು ಪ್ರಚಾರಕ್ಕಾಗಿಯೇ ಜನ್ಮವೆತ್ತಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕನಸಿನ ಕೂಸು ಸಂಸ್ಕೃತ ಸಂಧ್ಯಾ ಮಹಾವಿದ್ಯಾಲಯ.

1. ಪ್ರಸಕ್ತ 2015–16 ನೇ ಸಾಲಿನ ಶೈಕ್ಷಣಿಕ ವರ್ಷವು ಇದೀಗ ಪ್ರಾರಂಭವಾಗಲಿದ್ದು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಬಿ.ಎ ಪ್ರಥಮಾ, ದ್ವಿತೀಯ, ಮತ್ತು ತೃತೀಯ ವರ್ಷದ ಪ್ರವೇಶ ಪ್ರಕ್ರಿಯೆಗಳು ಪ್ರಾರಂಭಗೊಳ್ಳುತ್ತವೆ.
2. ಪದವಿ ಪೂರ್ವ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.
3. ಬಿ.ಎ ದ್ವಿತೀಯ ಮತ್ತು ತೃತೀಯ ವರ್ಷದ ತರಗತಿಗಳು ಜೂನ್ 22ರಿಂದ ಪ್ರಾರಂಭಗೊಳ್ಳುತ್ತದೆ. ಪ್ರಥಮ ವರ್ಷದ ತರಗತಿಗಳ ಪ್ರಾರಂಭದ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು.
4. ಪ್ರವೇಶ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ವಿಶ್ವವಿದ್ಯಾಲಯವು ನಿಗದಿ ಪಡಿಸಿರುವ ಮೊತ್ತವನ್ನು (4.500. ರೂ) **ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು** ಈ ಹೆಸರಿಗೆ ಡಿ.ಡಿ ಸ್ವೀಕರಿಸಿ ಇದರೊಂದಿಗೆ ಪ್ರವೇಶ ಅರ್ಜಿಯನ್ನು ಭರ್ತಿ ಮಾಡಿ ಇಂದಿನಿಂದ ಒಂದು ತಿಂಗಳ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.
5. ಅರ್ಜಿ ಪ್ರತಿಗಳು ಮತ್ತಿತರ ಶೈಕ್ಷಣಿಕ ವಿವರಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಲಭ್ಯವಿರುತ್ತವೆ. **www.ksu.ac.in**

**s/d**

**ಕುಲಸಚಿವರು**